(ಶ್ರೀ ಡಿ. ದೇವರಾಜ ಅರಸ್)

ಅಭ್ಯಂತರೂ ಇಲ್ಲ. ಇದರಿಂದ ತೊಂದರೆ ಕೂಡ ಆಗುವಾರದು. ಅಲ್ಲವೆ ಒಂದು ಕರ್ಟನಿಗಾದರೂ ವಿಚಾರವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುವುದು ಬೇಡವೇ ? ಹಾಗೆ ಮಾಡದೆ ಪತ್ರಿಕೆಯಲ್ಲಿ ಬಂದಿದೆ ಎಂದು ಇಲ್ಲಿ ಏಕಾಏಕಿ ವಿಷಯವನ್ನು ಎತ್ತಿಕೊಂಡು ಟೀಕೆ ಟಿಪ್ಪಣಿ ಮಾಡುವುದಾಗಲಿ ಅಥವಾ ಒಬ್ಬರನ್ನು ಇನ್ನೊಬ್ಬರು ನಿಂದನೆ ಮಾಡುವುದಾಗಲೀ ಸರಿಯೇ ಎಂಬುದನ್ನು ನಾನು ಕೇಳುತ್ತಿದ್ದೇನೆ. ಇಲ್ಲಿನ ಕಾರ್ಯಕಲಾಪಗಳು ರೂಲ್ಸ್ ಪ್ರಕಾರ ನಡೆದರೆ ಯಾರಿಗೂ ತೊಂದರೆ ಯಾಗುವುದಿಲ್ಲ ಅಧ್ಯಕ್ಷರಿಗೂ ತೊಂದರೆ ಆಗುವುದಿಲ್ಲ. ಈ ಸದನದ ಕಾಲ ಕೂಡ ವಿಳಂಬವಾಗುವುದಕ್ಕೆ ಅವಕಾಶವಿರುವುದಿಲ್ಲ.

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಕೆಲವು ಮಾನ್ಯ ಸದಸ್ಯರು ಪತ್ರಿಕೆಯಲ್ಲಿ ಓದಿ ಕೆಲವು ವಿಷಯಗಳ ಬಗ್ಗೆ ಅಜಿಟೇಟ್ ಆಗಿರಬಹುದು. ಅದರೆ ಇಲ್ಲಿನ ಎಲ್ಲ ಕಾರ್ಯಕಲಾಪಗಳ ಬಗ್ಗೆ ರೂಲ್ಸ್ ಇರುತ್ತೆ. ಅದಾಗ್ಯೂ ಮಾನ್ಯ ವಿರೋಧಪಕ್ಷದ ನಾಯಕರು ಮಾನ್ಯ ಸಚಿವರೂ ಕೂಡ ಸಭೆಯಲ್ಲಿ ಹಾಲಿ ಹಾಜರಿರುವುದರಿಂದ ಅವರೇನಾದರೂ ಹೇಳುವುದಿದ್ದರೆ ಹೇಳಲೆಂದು ತಿಳಿಸಿದ್ದಕ್ಕೆ ನಾನೂ ಒಪ್ಪಿ ಅವರಿಗೆ ಏನಾದರೂ ಹೇಳಿಕೆ ಮಾಡುವುದಿದ್ದರೆ ಮಾಡುವಂತೆ ಹೇಳಿದೆ. ನಾವು ಇಂಥ ಚರ್ಚೆಯಲ್ಲೇ ಈ ದಿವಸ 15-20 ನಿಮಿಷಗಳನ್ನು ಕಳೆದಿದ್ದೇವೆ. ಇನ್ನಾದರೂ ಎಲ್ಲರೂ ನಿಯಮಾವಳಿಗಳಿಗೆ ಅನುಸರಿಸಿ ಕಾರ್ಯಗಳನ್ನು ನಡೆಸೋಣ.

ಜೆ.ಎಲ್.ಕದಾಡಿ.—ಒಬ್ಬ ಹರಿಜನ ಮಹಿಳೆಯ ಬಗ್ಗೆ ಪೋಲೀಸಿನವರು ನಡೆಸಿರತಕ್ಕ ದಬ್ಬಾಳಿಕೆ ವಿಚಾರದಲ್ಲಿ ನಾನು 4-5 ದಿನಗಳ ಹಿಂದೆಯೇ ಒಂದು ಕಾಲಿಂಗ್ ಅಟೆಷನ್ ನೋಷನ್ ಕಳುಹಿಸಿದ್ದೆ. ಅದರ ಬಗ್ಗೆ ಅಧ್ಯಕ್ಷರು ಬೇಗ ಉತ್ತರವನ್ನು ತರಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ಅವನ್ನು ನಾನು ನೋಡುತ್ತೇನೆ. ಆದರೆ ನೀವು ಹೀಗೆ ವಿಷಯವನ್ನು ಎತ್ತಲು ಅವಕಾಶವಿಲ್ಲ.

NOTICE UNDER RULE 312

re : **propreity of the Minister of State for Eiectricity to hold President ship Etc., of Sevaral Co-operative institutions.**

ಶ್ರೀ ಎಚ್. ಡಿ. ದೇವೇಗೌಡ. (ಹೊಳೆನರಸೀಪುರ).— ಮಾನ್ಯ ಅಧ್ಯಕ್ಷರೇ ನಾನು ರೂಲ್ 312 ರ ಕೆಳಗೆ ಒಂದು ನೋಟೀಸನ್ನು ಕಳುಹಿಸಿದ್ದೇನು. ಅದು ಏನೆಂದರೆ ರಿಾಜ್ಯದಲ್ಲಿ ವಿದ್ಯುಚ್ಛಕ್ತಿಯ ರಾಜ್ಯ ಸಚಿವರು ಅನೇಕ ಸಹಕಾರಿ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿಯೂ ಹಾಗೂ ಸಂಚಾಲಕರಾಗಿಯೂ ಹುದ್ದೆಗಳನ್ನು ಹೊಂದಿರತಕ್ಕ ವಿಷಯದಲ್ಲಿ ಪ್ರಸಾಪ ನಡೆಸಬೇಕೆಂದು ಆ ನೋಟೀಸನ್ನು ಕೊಟ್ಟಿದ್ದೇನೆ. ಹಾಲಿ ಮಾನ್ಯ ಸಚಿವರೂ ಸಭೆಯಲ್ಲಿರುವುದರಿಂದ ಅವರೇನಾದರೂ ಅದರಬಗ್ಗೆ ಹೇಳುವುದಿದ್ದರೆ ಹೇಳಲಿ. ಅನಂತರ ನಾನು ನನ್ನ ವಿಷಯದ ಬಗ್ಗೆ ಮಾತನಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಈಗ ತಾನೆ ಮಾನ್ಯ ದೇವೇಗೌಡರೇನು ವಿಷಯ ಎತ್ತಿದ್ದಾರೆ ಅದೇ ವಿಷಯದಲ್ಲಿ ನಾನೂ ಕೂಡ ನೋಟೀಸನ್ನು ಕಳುಹಿಸಿದ್ದೇನೆ. ನನಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ (ವಿದ್ಯುಚ್ಛಕ್ತಿಯ ರಾಜ್ಯಸಚಿವರು).—ಮಾನ್ಯ ಅಧ್ಯಕ್ಷರೇ ವಿರೋಧಪಕ್ಷದ ನಾಯಕರು ರೂಲ್ 312ರ ಪ್ರಕಾರ ಕೊಟ್ಟಿರತಕ್ಕ ನೋಟೀಸಿನ ಕಾಪಿ ನನಗೂ ಬಂದಿದೆ. ಅವರ ನೋಟೀಸಿನಲ್ಲಿ ನಾನು ಕೆಲವು ಸಹಕಾರ ಸಂಸ್ಥೆಗಳಿಗೆ ರಾಜೀನಾಮೆ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ನಾನು ನಾಲ್ಕನೇ ತಾರೀಖು ಮಂತ್ರಿಯಾಗಿ ಪ್ರಮಾಣವಚನವನ್ನು ಸ್ವೀಕಾರ ಮಾಡಿದ್ದೇನೆ. ಆದಾದನಂತರ ಹುಬ್ಬಳ್ಳಿಯಲ್ಲಿ ಮಾರ್ಕೆಟಿಂಗ್ ಫೆಡರೇಷನ್ನಿನವರು ಇಟ್ಟುಕೊಂಡಿದ್ದ ಒಂದು ಮೀಟಿಂಗಿನಲ್ಲಿ ನಾನು ಆ ಸಂಸ್ಥೆಯಲ್ಲಿ ಇಟ್ಟುಕೊಂಡಿರುವ ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ಕೊಡಬೇಕಾಗಿರತಕ್ಕ ವಿಷಯವನ್ನು ಅಲ್ಲಿ ಪ್ರಸ್ತಾಪ ಮಾಡಿದ್ದಲ್ಲದೆ, ಅದೇ ವಿಷಯವನ್ನು ಪತ್ರಿಕೆಗಳಲ್ಲೂ ತಿಳಿಸಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳಿಗೂ ಈ ನನ್ನ ರಾಜೀನಾಮೆ ವಿಷಯ ಹೇಳಿ

ದ್ದೇನೆ. ಆದರೆ ಅಲ್ಲಿಯ ಮಾರ್ಕೆಟಿಂಗ್ ಫೆಡರೇಷನ್ನಿನ ಅನೇಕ ಸದಸ್ಯರುಗಳು ಮತ್ತು ಇನ್ನೂ ಕೆಲವರು ಬಂದು ಅಲ್ಲಿ ಆಲ್ಟರ್‌ನೆಟೀವ್ ಅರೇಂಜ್‌ಮೆಂಟ್ ಮಾಡುವವರೆಗೂ ರಾಜೀನಾಮೆ ಕೊಡ ಬಾರದೆಂದು ಕೇಳಿಕೊಂಡಿದ್ದಾರೆ. ಆದರೆ ನಾನಿನ್ನು ಕೆಲವೇ ತಿಂಗಳಲ್ಲಿ ಅಲ್ಲಿಂದ ರಾಜೀನಾಮೆ ಕೊಟ್ಟು ಹೊರಬರುವವನಿದ್ದೇನೆ. ಆದರೆ ನಾನು ಇಲ್ಲಿ ಮಂತ್ರಿಯಾಗಿದ್ದು ಅಲ್ಲಿ ಅಧ್ಯಕ್ಷನಾಗಿರತಕ್ಕ ಬಗ್ಗೆ ಯಾವ ಲೀಗಲ್ ಬಾರೂ ಅದಕ್ಕಿಲ್ಲ ಎಂದು ಈ ವಿಷಯ ಅನೇಕಡೆಗೆ ಗೊತ್ತಿರಬಹುದು. ಆದರೆ ಈ ಹಿಂದೆ ಕೂಡ ಇಂಥ ನಿದರ್ಶನಗಳಿದ್ದವು ಎಂಬುದಕ್ಕೆ ಉದಾಹರಣೆಗಳಿವೆ. ಹಿಂದೆ ಮಂತ್ರಿಗಳಾಗಿದ್ದ ಪಿ. ಎಂ. ನಾಡಗೌಡರು ಸಿಂಡಿಕೇಟ್ ಮತ್ತು ಬಾಗಿರ್‌ಕೋಟೆ ಸಹಕಾರ ಸಂಘಗಳಲ್ಲಿ ಅಧ್ಯಕ್ಷರಾಗಿದ್ದರು. ಹಾಗೇ ಶ್ರೀ ಶಂಕರೇಗೌಡರೂ ಕೂಡ ಅನೇಕ ಸಹಕಾರ ಸಂಸ್ಥೆಗಳಲ್ಲಿ ಅಧಿಕಾರ ದಲ್ಲಿದ್ದಾಗಲೂ ಕೆಲಸಮಾಡಿದ್ದಾರೆ. ಆದರೆ ನಾನು ಈ ಸಹಕಾರ ಸಂಸ್ಥೆಯ ಸ್ಥಾನಕ್ಕೆ ರಾಜೀನಾಮೆ ಕೊಡಬೇಕೆಂಬ ವಿಷಯದಲ್ಲಿ ನನ್ನ ಭಿನ್ನಾಭಿಪ್ರಾಯ ಏನೂ ಇಲ್ಲ. ಅವರು ಕೇಳಿರತಕ್ಕ ವಿಷಯ ಸ್ವಾಗತಾರ್ಹವಾದುದೇ ಆಗಿದೆ. ಆದರೆ ಇದಕ್ಕೆ ಸ್ವಲ್ಪ ಕಾಲಾವಕಾಶ ಮಾತ್ರ ಬೇಕಾಗಿದೆ, ಅಷ್ಟೇ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಲೀಗಲ್ ಬಾರ್ ಇಲ್ಲದಿದ್ದಾಗ್ಗೂ ಮಾರಲ್ ಬಾರ್ ಬಗ್ಗೆ ಏನು ಹೇಳುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ಈಗ ಸಂಬಂಧಪಟ್ಟ ಮಂತ್ರಿಗಳ ಅಭಿಪ್ರಾಯವನ್ನು ತಿಳಿದ ಹಾಗಾಯಿತು. ಇನ್ನು ಮೇಲೆ ಈ ವಿಷಯದಲ್ಲಿ ಮಾನ್ಯ ಮುಖ್ಯ ಸಚಿವರಿಂದ ಒಂದು ಹೇಳಿಕೆ ಬೇಕಾಗಿದೆ. ಅವರಿಂದ ಸ್ಪಷ್ಟೀಕರಣಬೇಕು. ಅವರು ಸಚಿವಸ್ಥಾನವನ್ನು ಸ್ವೀಕಾರಮಾಡಿ ಮೂರು ತಿಂಗಳಾಗಿರಬಹುದು.

ಪೀಪಲ್ ಎಜುಕೇಷನ್ ಸೊಸೈಟಿಯಲ್ಲಿ ನಾಡಗೌಡರು ಮತ್ತು ಶಂಕರೇಗೌಡರು ಇದ್ದರೆಂದು ಹೇಳಿದರು. Legally it is not baned ಎಂದು ಅಭಿಪ್ರಾಯವನ್ನು ವ್ಯಕ್ತಮಾಡಿದರು. ಇವತ್ತು ಅವರು ಮಾರ್ಕೆಟಿಂಗ್ ಫೆಡರೇಷನ್ನಿನ ಅಧ್ಯಕ್ಷರಾಗಿದ್ದಾರೆ, ಸೀಡ್ ಕಾರ್ಪೊರೇಷನ್ ಅಧ್ಯಕ್ಷರಾಗಿ ಅವರನ್ನು ನೇಮಕ ಮಾಡಿದ್ದೀರಿ. ಮಂಗಳೂರು ಫರ್ಟಿಲೈಸರ್ ಕಾರ್ಖಾನೆಯ ಡೈರೆಕ್ಟರಾಗಿ ದ್ದಾರೆ, ಫುಡ್ ಕಾರ್ಪೊರೇಷನ್ನಿನ ಡೈರೆಕ್ಟರಾಗಿದ್ದಾರೆ. ನ್ಯಾಷನಲ್ ಕೋ-ಆಪರೇಟಿವ್ ಫೆಡರೇಷನ್ನಿನ ಸದಸ್ಯರಾಗಿದ್ದಾರೆ, ಉಪಾಧ್ಯಕ್ಷರಾಗಿದ್ದಾರೆ, ಹಾಸನದಲ್ಲಿ ಜಿಲ್ಲಾ ಕೋ-ಆಪರೇಟಿವ್ ಬ್ಯಾಂಕಿನ ಡೈರೆಕ್ಟರಾಗಿದ್ದಾರೆ. ಆದರೆ ಮಂತ್ರಿಗಳ ಕೆಲಸವನ್ನು ಬಹುಶಃ ಅವರು ಯಾವ ಬೇರೆ ವ್ಯವಹಾರದ ಗಮನಕ್ಕೆಬಿಲ್ಲದೆ ಚೆನ್ನಾಗಿ ಮಾಡಬೇಕಾದರೆ ಇಷ್ಟೆಲ್ಲಾ ಕಾರ್ಯಗಳಿರುವಿದ್ದರೆ ಮಾಡುವುದಕ್ಕಾಗುವುದಿಲ್ಲ. ಇದು ದೊಡ್ಡ ಪ್ರಶ್ನೆ. ಮಂತ್ರಿಯ ಕೆಲಸ ಪಾರ್ಟ್ ಟೈಂ ಕೆಲಸವಲ್ಲ. ಜತ್ತಿಯವರು ಹಿಂದೆ ಈ ಸಭೆಯಲ್ಲಿ ಒಂದು ಸಲ ಈ ಸಂಬಂಧದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ತರಕಾರಿ ತರಲು ಮಂತ್ರಿಗಳು ತಮಗೆ ಸರಕಾರ ಸೀಡಿರುವ ಕಾರನ್ನುಪಯೋಗಿಸುವುದು ತಪ್ಪು ಎಂದು. ಮಂತ್ರಿಗಳು ಕಾರನ್ನು ಯಾವಾಗ ಉಪಯೋಗಿಸಬೇಕೆಂಬುದನ್ನು ಹೇಳಿದ್ದಾರೆ. ಮಂತ್ರಿಗಳಿಗೆ ಕಾರು, ಸಂಬಳ, ಸೌಲತ್ತು ಮನೆ ಮುಂತಾದ್ದನ್ನೆಲ್ಲಾ ಸರಕಾರದಿಂದ ಕೊಡುವರು. ಹಾಗಿರುವಾಗ ಅವರು ಬೇರೆ ಸಂಸ್ಥೆಗಳಲ್ಲಿ ಅಧ್ಯಕ್ಷರು ಆಗುವುದು ಮುಂತಾದ್ದನ್ನಿಟ್ಟುಕೊಂಡರೆ ಮಂತ್ರಿಯ ಕೆಲಸವನ್ನು ಅವರು ಯಶಸ್ವಿಯಾಗಿ ತಮ್ಮ ಕಾರ್ಯವನ್ನು ನಿರ್ವಹಿಸಲು ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕು. ಬೇರೆ ಸಂಸ್ಥೆಗಳಲ್ಲಿ ಡೈರೆಕ್ಟರು, ಅಧ್ಯಕ್ಷರು ಆಗಿ ಮುಂದುವರೆಯುವುದು ಲೀಗಲ್ಲಾಗಿ ತಪ್ಪಲ್ಲ ಎಂದು ಮಾನ್ಯ ಸಚಿವರು ತಿಳಿಸಿರುವುದು ಕೂಡ ಸರಿಯಲ್ಲವೆಂದು ಹೇಳಬೇಕಾಗುತ್ತದೆ. ನಾವು ಎಂ. ಎಲ್.ಎ. ಆಗಿ ಪ್ರಮಾಣವಚನ ಇಲ್ಲಿ ಸ್ವೀಕಾರ ಮಾಡುತ್ತೇವೆ, ಮಂತ್ರಿಗಳು ರಾಜ್ಯಪಾಲರ ಬಳಿ ಪ್ರಮಾಣವಚನವನ್ನು ಸ್ವೀಕರಿಸುವರು. ಅವರೇನು ಜವಾಬ್ದಾರಿಯನ್ನು ಹೊತ್ತಿರುವರೋ ಅದನು ಇತರ ಸಂಸ್ಥೆಗಳ ಜವಾಬ್ದಾರಿಯನ್ನೂ ಹೊತ್ತು ಸರಿಯಾಗಿ ನಿರ್ವಹಣೆ ಮಾಡಲು ಸಾಧ್ಯವೇ ಎಂಬುದೇ ನನ್ನ ಪ್ರಶ್ನೆ.

Under the Co-operative Act, if any co-operative institution has done any commitment or mistake then the Government is at liberty to supersede or take action under relevant sections. Further the Government has got powers even to surcharge members. But when a Minister is in charge of both can we expect such a provision of the Co-operative Act being enforced without any fear or favour ? So, I want a clarification from the Hon. Chief Minister. I think he is also interested in setting up good precedents.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಮಂತ್ರಿಗಳಾದ ಶ್ರೀಕಂಠಯ್ಯನವರು ನೀಡಿದ ಹೇಳಿಕೆಯನ್ನು ಕೇಳಿದೆ. ಅವರು ಎರಡು ವಿಷಯ ಹೇಳಿದ್ದಾರೆ. ಒಂದು ರಾಜೀನಾಮೆ ತಾವು ಇತರ ಸಂಸ್ಥೆಗಳಲ್ಲಿ ಅಧ್ಯಕ್ಷರು ಮಗೈರೆ ಆಗಿರುವುದಕ್ಕೆ ರಾಜಿನಾಮೆ ಕೊಡಬಾರದೆಂದಿಲ್ಲ, ಕೊಡಬೇಕೆಂಬ ಇಚ್ಛೆಯಿದೆ, ಅದಕ್ಕೆ ಸ್ವಲ್ಪ ಕಾಲಾವಕಾಶಬೇಕು ಎಂದು. ಎರಡನೆಯ ವಿಷಯ ಕಾನೂನು ವಿಷಯ. ಅವರ ಇಂಟೆನ್‌ಷನ್ ಒಳ್ಳೆಯದೇ ಇರಬಹುದು, ಅವರ ಬಗ್ಗೆ ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಅವರೆ ಅವರು ಮಂತ್ರಿಗಳಾದಮೇಲೆ ಅವರಿದ್ದ ಇತರ ಸಂಸ್ಥೆಗಳಿಗೆ ಇನ್ನೊಬ್ಬರನ್ನು ನೇಮಕ ಮಾಡುವುದಕ್ಕೆ ಸಾಧ್ಯವಾಗಲಿಲ್ಲವೆಂಬುದು ಪ್ರಶ್ನಾಸ್ಪದವಾದ ವಿಷಯ. ಮಾರ್ಕೆಟಿಂಗ್ ಫೆಡರೇಷನ್ ಏನಿವೆ ಅದಕ್ಕೆ ಸಂಬಂಧಪಟ್ಟಂತೆ ಅದರ ಅಡಳಿತದ ಅನುಭವವಿರುವವರು ಕೋಅಪರೇಟಿವ್ ಇನ್‌ಸ್ಟಿಟ್ಯೂಷನ್ನುಗಳ ಅನುಭವವಿರುವವರು ಬೇಕಾದಷ್ಟು ಜನರಿದ್ದಾರೆ ಹಾಗಿರುವಾಗ ಅಲ್ಲಿಗೆ ಬೇರೆಯವರನ್ನು ಹಾಕಿ ತಾವು ರಾಜೀನಾಮೆ ನೀಡಲು ಇನ್ನೂ ಸ್ವಲ್ಪ ಕಾಲ ಬೇಕೆಂದು ಹೇಳುವ ಅಭಿಪ್ರಾಯ ಸರಿಯಲ್ಲ. ಇದನ್ನು ಶ್ರೀರಾಮುಲುರವರು ಒಪ್ಪಬಹುದು. ಅವರು ಎಷ್ಟು ಟ್ರೇಡ್ ಯೂನಿಯನ್ನುಗಳನ್ನು ಕಟ್ಟಿಕೊಂಡಿದ್ದಾರೋ ಗೊತ್ತಿಲ್ಲ, ಟ್ರೇಡ್ ಯೂನಿಯನ್ನಿಗೆ ಸರಿಯಾದ ಅನುಭವ ಇರುವವರು ಸಿಕ್ಕುವುದು ಕಷ್ಟ. ಅಲ್ಲಿನ ರೀತಿಯೇ ಬೇರೆ, ಅಲ್ಲಿನ ವ್ಯವಹಾರವೇ ಬೇರೆ. ಮಾನ್ಯ ಮಂತ್ರಿಗಳು ಮಾರ್ಕೆಟಿಂಗ್ ಫೆಡರೇಷನ್ನಿಗೆ ಸುಲಭವಾಗಿ ಬೇರೆಯವರನ್ನು ನೇಮಕಮಾಡಬಹುದಾಗಿತ್ತು. ಆದುದರಿಂದ ಅವರು ಕೊಟ್ಟ ಕಾರಣ ಸಮಂಜಸವಾಗಿ ಕಾಣುತ್ತಿಲ್ಲ.

ಎರಡನೆಯದು ಕಲೆಕ್ಟಿವ್ ರೆಸ್ಪಾನ್ಸಿಬಿಲಿಟಿ. ಅವರು ರಾಜ್ಯ ಸಚಿವರು, ಕ್ಯಾಬಿನೆಟ್ ಮೀಟಿಂಗ್ ಆಟೆಂಡ್ ಮಾಡಿದಿರಬಹುದು. ಅವರಿಗೆ ಮಂತ್ರಿಗಳಾಗಿ ಕಲೆಕ್ಟಿವ್ ರೆಸ್ಪಾನ್ಸಿಬಿಲಿಟಿ ಇದೆ. ಅವರಿಗೆ ಬಹಳ ಮುಖ್ಯವಾದ ಪೋರ್ಟ್‌ಫೋಲಿಯೋ ಇದೆ. ಹಾಗಿರುವಾಗ ಬೇರೆ ವ್ಯವಹಾರಗಳಲ್ಲಿ ನಿರತರಾಗಲು ಅವಕಾಶವಿರುವುದಿಲ್ಲ. ಅವರಿಗೆ ಸಂಬಂಧಪಟ್ಟಿರುವ ಫೆಡರೇಷನ್ ಅಥವ ಇತರ ಸಂಸ್ಥೆಗಳಿಗೆ ಸಂಬಂಧಪಟ್ಟ ಹಾಗೆ ಏನಾದರೂ ತಕರಾರು ಬಂದರೆ ಆಗ ಜವಾಬ್ದಾರಿ ಯಾರ ಮೇಲೆ ಬೀಳುವುದೆಂಬುದನ್ನು ಅವರು ಯೋಚನೆಮಾಡಬೇಕು. ಸರಕಾರದ ಮೇಲೆ ಬೀಳುವುದು, ಸರಕಾರ ಆ ತಪ್ಪಿಗೆ ಗುರಿಯಾಗಬೇಕು. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಒಪ್ಪಬಹುದು. ಆದರೆ ಇದು ಸರಿಯಲ್ಲ. ಅದನ್ನು ಹೊರಬೇಕಾದ ಪ್ರಮೇಯವಿಲ್ಲ. ಬೇರೆಯವರಿಗೆ ಅದರ ಜವಾಬ್ದಾರಿಯನ್ನು ವಹಿಸಬೇಕು. ಮಂತ್ರಿಗಳು ಹೇಳಿದ್ದು ಸಮಂಜಸವಾಗಿಲ್ಲ. ಕಾನೂನು ಬದ್ಧವಾಗಿದೆಯೆಂದು ಅವರು ಹೇಳಿದ್ದೂ ಸರಿಯಲ್ಲವೆಂದು ಕಾಣುತ್ತದೆ. ಅವರು ಈ ಸಂಬಂಧದಲ್ಲಿ ಯಾವುದೋ ನಿದರ್ಶನ ಕೊಟ್ಟರು. ಯಾರೋ ಹಿಂದೆ ತಪ್ಪು ಮಾಡಿದ್ದರೆ ಅದನ್ನು ಮುಂದುವರೆಸುವುದು ಸಮಂಜಸವಲ್ಲ, ಹಿಂದೆ ಯಾರಾದರೂ ತಪ್ಪು ಮಾಡಿದ್ದರೆ ಅದು ತಪ್ಪು ಎಂದು ಹೇಳಬೇಕು. ಮತ್ತೆ ಅದೇ ತಪ್ಪನ್ನು ಮಾಡಬಾರದು. ಅವರು ತಪ್ಪು ಮಾಡಿದರು, ನಾವೇಕೆ ಮಾಡಬಾರದು ಎಂಬ ಧಾಟಿಯಲ್ಲಿ ಮಂತ್ರಿಗಳು ಮಾತನಾಡಿದ ಹಾಗೆ ಕಾಣುತ್ತದೆ. ಅದು ಖಂಡನೀಯ. ಅವರು ಎಷ್ಟು ಕಾಲಾವಧಿಯವರೆಗೆ ಇತರ ಸಂಸ್ಥೆಗಳಲ್ಲಿ ಮುಂದುವರೆಯುವರೆಂಬುದನ್ನು ನಿರ್ದಿಷ್ಟವಾಗಿ ಹೇಳಬೇಕು. ಅವನ್ನು ಮುಖ್ಯಮಂತ್ರಿಗಳು ಸ್ಪಷ್ಟಪಡಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಶ್ರೀಕಂಠಯ್ಯನವರು ಕೆಲವು ದಿವಸಗಳಲ್ಲಿ ರಾಜೀನಾಮೆ ಕೊಡುತ್ತೇನೆಂದು ಹೇಳಿದರು. ಜೊತೆಗೆ ಕೆಲವು ಉದಾಹರಣೆಗಳನ್ನು ಕೊಟ್ಟರು. ಅವರು ಒಳ್ಳೆಯ ಸಂಪ್ರದಾಯವನ್ನು ಅನುಸರಿಸುವುದಾದರೆ ಮೊದಲು ತಮ್ಮ ಸಂಬಂಧವಿರುವ ಇತರ ಸಂಸ್ಥೆಗಳ ಅಧಿಕಾರಕ್ಕೆ ರಾಜೀನಾಮೆ ಕೊಡಬೇಕು. ಸೀಡ್ ಕಾರ್ಪೊರೇಷನ್ನಿನ ವಿಷಯದಲ್ಲಿ ಈ ಸಭೆಯಲ್ಲಿ ಆರೋಪ ಮಾಡಿದ್ದಾರೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅದು ಸೀಡ್ ಫೆಡರೇಷನ್.

10-30 A. M.

ಶ್ರೀ ಕಾಗೋಡು ತಿಮ್ಮಪ್ಪ.—ಆದ್ದರಿಂದ, ಅವರು ಅಧ್ಯಕ್ಷ ಸ್ಥಾನವನ್ನು ಹೊಂದಿರತಕ್ಕ ಕೋಅಪರೇಟಿವ್ ಫೆಡರೇಷನ್ ಬಗ್ಗೆ ಕೆಲವು ವಿಚಾರಗಳನ್ನು ನಾವು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಮಂತ್ರಿಗಳಾಗಿ ಆ ಸ್ಥಾನಕ್ಕೆ ಅಂಟಿಕೊಂಡಿದ್ದರೆ ಸ್ವಾಭಾವಿಕವಾಗಿ ಕೆಲವು ತಪ್ಪುಗಳನ್ನು ಮುಚ್ಚುವುದಕ್ಕೆ ಸಾಧ್ಯವಾಗುತ್ತದೆ ಎನ್ನುತಕ್ಕ ಭಾವನೆ ಬರುತ್ತದೆ. ಅದಕ್ಕೆ ಅವಕಾಶ ಬಾರದ ರೀತಿಯಲ್ಲಿ ಸಮಯವನ್ನು ಕಾಯದೆ ನೀವೆ ತಿಳಿದುಕೊಂಡು ರಾಜೀನಾಮೆ ಕೊಡುವುದು ಒಳ್ಳೆಯದು.

Sri D. DEVARAJ URS.—Madam Speaker, I have carefully listended to the Hon. Leader of the Opposition as well as Mr. Krishnan and Mr. Thimmappa. In principle, I think, there is no difference of opinion so far as the propriety the conduct of a Minister continuing in a particular position. As a principle, I do agree, but at the same time. I would like to add that merely because one is a Minister he is not debarred from being the Chairman of any Corporation. It is not merely a question of Mr. Nadagowda and Shankaragowda when they were Ministers being in this body or any other body. Even now, in our Government, there are Ministers who are made Chairman of certain Corporations and Federations for instance MISL. The same argument here put forth by the Hon. Leader of the Opposition can be adduced to that as well. What I just want to say is this. It is not as if a Minister of the State of Karnataka Government for Electricity has been continuing there as a Chairman, as if his continuance is some peculiar example which we are trying to debate or discuss. It is on the lines of the practice being conducted else where as well as here. Nevertheless. As I said earlier, I am one of these who would like to agree with the principle which the Hon. the Leader of Opposition has just now enunciated. Therefore, though legally it is found to be not a bar for a Minister to continue, from the point of view of propriety of being there. I have requested the Minister to consider this aspect and vacate the seat as early as possible.

ಶ್ರೀ ಎಚ್. ಡಿ. ದೇವೇಗೌಡ.—ಪಾನ್ಯ ಮುಖ್ಯಮಂತ್ರಿಗಳು ಕೊಟ್ಟ ವಿವರಣೆಯಲ್ಲಿ, ಪ್ರಿನ್ಸಿಪಲ್ ಅನ್ನು ಒಪ್ಪಿಕೊಳ್ಳುತ್ತೇವೆಂದು ಹೇಳಿದ್ದಾರೆ. ಅಲ್ಲದೆ ಮತ್ತೊಂದು ವಿಷಯವನ್ನು ಹೇಳಿದ್ದಾರೆ. ಏನೆಂದರೆ ಕೆಲವು ಮಂತ್ರಿಗಳು ಕಾರ್ಪೊರೇಷನ್‌ನಲ್ಲಿ ಕೆಲಸ ಮಾಡತಕ್ಕ ನಿದರ್ಶನಗಳು ಇವೆ ಎಂದು. ಎಂ.ಐ.ಎಸ್ ಎಲ್. ಸ್ಯಾಲ್ ಇಂಡಸ್ಟ್ರೀಸ್ ಕಾರ್ಪೊರೇಷನ್ ನಂಸ್ಥೆಗಳನ್ನು ಹೇಳಿದರು. ಆರ್ಟಿಕರ್ ಆಫ್ ಅಸೋಸಿಯೇಷನ್ನಿನಲ್ಲಿ ನಾವು ಮಂತ್ರಿಗಳು ಛೇರ್ಮನ್ ಆಗಿ ಕೆಲಸ ಮಾಡಲಿಕ್ಕೆ ಪ್ರಾವಿಷನ್ ಅನ್ನು ಮಾಡಿಕೊಂಡಿದ್ದೇವೆ. Unless there is scope in the Articles of Association, a Minister cannot function as a Chairman. But this is altogether a different aspect. You cannot mix matters. Please enlighten us. In case a Corporation belongs to his department suppose the Corporation belongs to the Industries Department-the Minister can become the Chairman of a Small Scale Industries Corporation. Here, it is a peculiar case. The Federation Chairman who had been elected by the Board of Directors according to the Co-operative Act-can he function as Minister as well as the Chairman ? This is altogether a different issue. Government has got the supreme power even to surcharge the member including the President. I want to know, under such circumstances, what is the role of the Government. Here, the joint responsibility is also there on the Government. There he is acting as president wherein he is subjected to various punishments under the Act.

Sri D. DEVARAJ URS.—I have accepted the principle enunciated by the Hon. the Leader of the Opposition, because of the peculiar circumstances. Otherwise, I would have stated here : 'There is no objection ; he can continue'. Apart from the legality, both aspects

(SRI D. DEVARAJ URS)

were discussed. Legally he has been advised there is no bar. In spite of it all, if there are conventions which were enunciated and quoted now, when Ministers in similar circumstances had been allowed to continue in so many other bodies, I am not relying upon them. That is my point. Mr. Shankaragowda's instance was quoted.

Sri H. D. DEVEGOWDA.—Mr. Shankaragowda was associated with a private institution.

Sri D. DEVARAJ URS —That is also a private educational institution coming under the Grant-in-Aid Code.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಮುಖ್ಯಮಂತ್ರಿ ತತ್ವವನ್ನು ಒಪ್ಪುತ್ತೀವೆಂದು ಹೇಳಿದರು. ಸಹಕಾರಿ ರಂಗದಲ್ಲಿ ಒಮ್ಮೊಮ್ಮೆ ಮುಖ್ಯಮಂತ್ರಿಗಳೂ ಕೂಡ ಅಧ್ಯಕ್ಷರಾಗತಕ್ಕ ಪ್ರಸಂಗ ಬರುತ್ತವೆ. ಪಂಜಾಬ್ ಮುಖ್ಯಮಂತ್ರಿಗಳು ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿದಿದ್ದಾರೆ, ಕೇಂದ್ರದ ಟಿ. ಎ. ಪೈ ಅವರು ನ್ಯಾಷನಲ್ ಕೋ ಆಪರೇಟೀವ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ಅಧ್ಯಕ್ಷರಾಗಿ ಮುಂದುವರಿದಿದ್ದಾರೆ. There are instances in the country where, many a time, the Chief Minister is the Chairman of the Institution. That does not bar him from becoming Chairman. Suppose he misappropriates money, he will be prosecuted. There is every legality in favour of the Minister holding the charge. ಮಾನ್ಯ ದೇವೇಗೌಡರ ಮಾತನ್ನು ವಿರೋಧಮಾಡಲಿಕ್ಕೆ ಈ ಮಾತನ್ನು ಹೇಳಿಲ್ಲ.

Sri D. DEVARAJ URS.—What the Hon. Member just now stated is also there. He has brought it to the notice of this House, how in such matters, things have been in practice. either here or elsewhere. But, inspite of it all I have already made my point clear. I do not say itis a healthy practice to have a Minister in such a body. If it were to be part of his portfolio or the subject which is in his portfolio, then perhaps, we could have stated 'Yes ; he should continue' or whatever it is. That point also is there. That is why I am agreeing in principle. Even now, I stick to it. I have advised the Minister to give up this position as early as possible. I think with this the, matter should be colsed.

ಶ್ರೀ ಎಚ್. ಡಿ. ದೇವೇಗೌಡ. ಮಾನ್ಯ ಮುಖ್ಯಮಂತ್ರಿಗಳು ನಾನು ಹೇಳಿದ ರೀತಿಯಲ್ಲಿ ತತ್ವವನ್ನು ಒಪ್ಪಿಕೊಳ್ಳುತ್ತೀನೆಂದು ಹೇಳಿದ್ದಾರೆ. ಇದರ ಬಗ್ಗೆ ವಿವಾದ ಬೇಕಾಗಿಲ್ಲ. ಆದರೆ ಎಂದು, ಯಾವಾಗ ಎನ್ನುವುದನ್ನು ಹೇಳಬೇಕು. ಮಾನ್ಯ ಶ್ರೀಕಂಠಯ್ಯನವರು ಮಂತ್ರಿ ಪದವಿಯನ್ನು ವಹಿಸಿಕೊಂಡು ಮೂರು ತಿಂಗಳಾಗಿದೆ. ಮಾನ್ಯ ಕೆ. ಎಚ್. ಪಾಟೀಲರು ಒಂದು ರಿಲವೆಂಟ್ ಪಾಯಿಂಟನ್ನು ಎತ್ತಿದ್ದಾರೆ. ಮುಖ್ಯಮಂತ್ರಿಗಳೂ ಒಂದು ಕಡೆ ಛೇರ್ಮನ್ ಆಗಿ ಇದ್ದಾರೆ ಎಂದು.

11-00 A.M.

† ಶ್ರೀ ಎಸ್. ಎಂ. ಕೃಷ್ಣ(ಕೈಗಾರಿಕಾ ಹಾಗೂ ಸಾಂಸದಿಕ ವ್ಯವಹಾರಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ,

ಹಲವು ಶತಮಾನಗಳಿಂದಲೂ ಭಾರತ ಮತ್ತು ಸಿಕ್ಕಿಂಗೆ ಮಧುರವಾದ ಬಾಂಧವ್ಯವಿದೆ. ಇದುವರೆಗೂ ಕೂಡ ಸಿಕ್ಕಿಂ ರಕ್ಷಣೆ ವಿದೇಶಾಂಗ ವ್ಯವಹಾರ ಮತ್ತು ಆ ದೇಶದ ಅಭಿವೃದ್ಧಿ ಮತ್ತು ಇತರ ವಿಚಾರಗಳ ಬಗ್ಗೆ, ಅದರ ಸಂಪೂರ್ಣ ಹೊಣೆಗಾರಿಕೆ ಭಾರತ ದೇಶದ ಮತ್ತು ಭಾರತ ಸರಕಾರದ ಮೇಲೆ ಅವಲಂಬನೆ ಮಾಡುತ್ತಿತ್ತು. ಇತ್ತೀಚಿನ ವರ್ಷಗಳಲ್ಲಿ ಸಿಕ್ಕಿಂನಲ್ಲಿ ಒಂದು ರೀತಿಯಾದ ಹೊಸ

Sri K. H. PATIL.—Sri T. A. Pai was the Chairman of the NCDC for some time.

ಶ್ರೀ ಎಚ್. ಡಿ. ದೇವೇಗೌಡ.—ಈಗ ನಾನು ಯಾವುದೇ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಪಬ್ಲಿಕ್ ಅಕೌಂಟ್ ಕಮಿಟಿಯವರು ಈಮಾರ್ಕೆಟಿಂಗ್ ಫೆಡರೇಷನ್ ಸಂಸ್ಥೆಯ ವಿಷಯವನ್ನು ಎಕಾಮಿನ್ ಮಾಡುತ್ತಿದ್ದಾರೆ. ಅದು ಮುಗಿಯುವವರೆಗೆ ಯಾವುದೇ ಒಂದು ಮಾತನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆವರು ನಂಘಸಂಸ್ಥೆಗಳಲ್ಲಿ ಮುಂದುವರಿಯುವುದು ಸತ್ ಸಂಪ್ರದಾಯವಲ್ಲ. ಶ್ರೀಮಾನ್ ಕೆ.ಎಚ್.ಪಾಟೀಲ್ ರವರು ಬೇಕಾದಷ್ಟು ಸಹಕಾರ ಸಂಸ್ಥೆಗಳಲ್ಲಿ ಪ ತಿನಿಧಿಸಿದಂಥ ವ್ಯಕ್ತಿ. ಈ ಸಭೆಯಲ್ಲಿ ನೇಮಕಮಾಡಿದಂತ ಒಂದು ಕಮಿಟಿ ಏನು ಇದೆ ಆದರ ಬಗ್ಗೆ ಯಾವ ಒಂದು ವಿಷಯವನ್ನು ಈ ಹಂತದಲ್ಲಿ ಹೇಳುವುದಕ್ಕೆ ಹೊಂಗುವುದಿಲ್ಲ. It is premature. ಆಮೇಲೆ ಒಂದು ರಿಪೋರ್ಟ್ ಕಳುಹಿಸಿಕೊಡುತ್ತೇವೆ. ಮಗವ್ ಆಗಿ ಹೇಳುತ್ತೇನೆ I am not prepared to go ದಯವಿಟ್ಟು ಅವರು ಒಂದು ಸತ್ ಸಂಪ್ರದಾಯವನ್ನು ಹಾಕಬೇಕೆಂದು ಇದ್ದರೆ ದಯವಾಡಿ ಅವರು ರಾಜೀನಾಮೆ ಕೊಡಬೇಕು It is high time he should resign. ಮಂಗಳೂರು ಫರ್ಟಿಲೈಸರ್ ಕಾರ್ಪೊರೇಷನ್ ವಿಷಯವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಅಷ್ಟಕ್ಕೆ ನಿಲ್ಲಿಸುತ್ತೇನೆ. ಯಾಪುದೇ ಒಂದುಸಂಸ್ಥೆಯಲ್ಲಿ ಕೆಲಸಮಾಡಬೇಕಾದರೆ ಆದರ ವ್ಯಾಪ್ತಿಯಲ್ಲಿ ಏನೇನು ಬರುತ್ತದೆ ಅದಕ್ಕೆ ಮಂತ್ರಿಗಳಿಗೂ ಮತ್ತು ನದಸ್ಯರಿಗೂ ವ್ಯತ್ಯಾಸವಿರುತ್ತದೆ. I do't want to elaborate all these points. I earnestly request the Hon. Chief Minister to direct his colleage, to vacate these places. Three months have already been elapsed. Otherwise, unnecessarily, we may have to take up this issue. I am playing the dual role as Chairman of the P.A.C. and the Leader of the Opposition I do not want to enter again into this controversy and I request the Hon Chief Minister in all humility at my command to direct his collegue to resign from his post. I think the Hon, Chief Minister will agree with me because I do not want to set any bad precedent. ಮೈಸೂರು ಯೂನಿವರ್ಸಿಟಿ ಎಲೆಕ್ಷನ್ ಮಾಡಿ ನಾಳೆ ಪಜಾವಾಡಿದ್ದಾರೆ. ಅದು ಯಾವ ಸರ್ ಕಮ್ಸ್‌ಜೆನ್ಸ್ ಬಂತು ಅದಕ್ಕೆ ವಿವರಣೆ ಕೊಡಬೇಕು.

Karnataka Civil Service (Revision of Pay of certain Categories of Posts) Bill, 1975—(*Introduction*)

MADAM SPEAKER.— Hon. Minister for Finance and Housing may introduce the Karnataka Civil Services (Revision of pay of certain Categories of posts) Bill, 1975, and the Karnataka Sales Tax (Amendment) Bill, 1975.

Sri M. S. KRISHNAN (Malleswaram).—I rise on a Point of Order. Before the Introduction, is made, I would like to know whether a Statement has been placed on the table of this House explaining the circumstances under which the Government was compelled to issue these Ordinances.

MADAM SPEAKFR.—I think it is in the Bill.

Sri M. S. KRISHNAN, —According to Rule No. 70 (1) of the Rules of Procedure and Conduct of Business in the Karnataka Legislative Assembly, whenever a Bill seeking to replace an Ordinance with or without modification is introduced in the Assembly, there shall be placed before the Assembly along with the Bill a statement explaining the circumstances which necesitated immediate legislation by Ordinance. I wont to know whether such thing is placed on the table ofthe House?